# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 81 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| (ಅ) | ಪವನ ವಿದ್ಯುತ್ ಉತ್ಪಾದನೆಗೆ ಸೂಕ್ತ ಸ್ಥಳಗಳಾದ BESCOM ವ್ಯಾಪ್ತಿಯ ಚಿತ್ರದುರ್ಗ, ದಾವಣಗೆರೆ ಹಾಗೂ ತುಮಕೂರು ವಿದ್ಯುತ್ ಪ್ರಸರಣ Sub station ಗಳಲ್ಲಿ ವಿದ್ಯುತ್ evaculation facility ಇಲ್ಲದಿರುವುದರಿಂದ ಹಾಗೂ Green Corridor Station Sub station ಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತಿಲ್ಲದಿರುವುದರಿಂದ ಸಣ್ಣ ಪ್ರಮಾಣ ಹೂಡಿಕೆದಾರರು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಾವಣಗೆರೆ ವೃತ್ತ ವ್ಯಾಪ್ತಿಯಲ್ಲಿ ಹಾಲಿ ಇರುವ ವಿದ್ಯುತ್ ಉಪಕೇಂದ್ರಗಳಲ್ಲಿ evacuation facility ಉತ್ತಮವಾಗಿರುತ್ತದೆ.<br><br>ಕೇಂದ್ರ ಸರ್ಕಾರದ ಅನುದಾನ ಪಡೆದು ಈ ಕೆಳಕಂಡ ಕಾಮಗಾರಿಗಳು GEC Phase-I ಅಡಿಯಲ್ಲಿ ಪೂರ್ಣಗೊಂಡಿರುತ್ತವೆ.<br><br>1. 400 ಕೆ.ವಿ. ಹಿರೇ ಮಲ್ಲನಹಳ್ಳಿ ವಿದ್ಯುತ್ ಉಪಕೇಂದ್ರ<br>2. 220 ಕೆ.ವಿ. ಹೊಸದುರ್ಗ ವಿದ್ಯುತ್ ಉಪಕೇಂದ್ರ<br>3. 220 ಕೆ.ವಿ. ಚಿತ್ರದುರ್ಗ ಹಾಗೂ ಹಿರಿಯೂರು ನಡುವೆ ಎರಡನೇ ವಿದ್ಯುತ್ ಪ್ರಸರಣ ಮಾರ್ಗ<br>4. 400 ಕೆ.ವಿ. ಪಿಜಿಸಿಐಎಲ್ ಹಿರಿಯೂರು – 220 ಕೆ.ವಿ. ಹಿರಿಯೂರು ನಡುವೆ ಎರಡನೇ ವಿದ್ಯುತ್ ಪ್ರಸರಣ ಮಾರ್ಗ. |
| (ಆ) | ಹಾದಾದಲ್ಲಿ, ಸದರಿ Sub station ಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು) | ಕೆ.ಪಿ.ಟಿ.ಸಿ.ಎಲ್ ವತಿಯಿಂದ 220 ಕೆ.ವಿ. ಬೆಂಕಿಕೆರೆ ವಿದ್ಯುತ್ ಉಪಕೇಂದ್ರ, ಹಾಗೂ 66 ಕೆ.ವಿ. ಪಂಡರಹಳ್ಳಿ – ಹೊಳಲ್ಕೆರೆ ಜೋಡಿ ಪ್ರಸರಣ ಮಾರ್ಗವನ್ನು ಚಾಲನೆಗೊಳಿಸಲಾಗಿದೆ.<br><br>ಅದಲ್ಲದೆ ತುಮಕೂರು ಪ್ರಸರಣ ವಲಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಹೊಸ ಯೋಜನೆಗಳು ಅನುಮೋದನೆಗೊಂಡಿರುತ್ತವೆ.<br><br>1. 220 ಕೆ.ವಿ. ಪಿ.ಡಿ.ಕೋಟೆ ವಿದ್ಯುತ್ ಉಪಕೇಂದ್ರ – ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು, ಅವಾರ್ಡ್ ಹಂತದಲ್ಲಿದೆ<br>2. 220 ಕೆ.ವಿ. ಹಾನಗಲ್ ವಿದ್ಯುತ್ ಉಪಕೇಂದ್ರ – ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು, ಅವಾರ್ಡ್ ಹಂತದಲ್ಲಿದೆ. |

| | | |
|---|---|---|
| | | 3. 66/11 ಕೆ.ವಿ. ವಿ.ವಿ. ಕೇಂದ್ರ ತುರುವನೂರು ಒಂಟಿ ಪ್ರಸರಣ ಮಾರ್ಗ (ಎಸ್.ಸಿ. ಲೈನ್) ನಿಂದ (ಜೋಡಿ ಪ್ರಸರಣ ಮಾರ್ಗವನ್ನಾಗಿ (ಡಿ.ಸಿ. ಲೈನ್) ಪರಿವರ್ತಿಸಲು / ಬದಲಾಯಿಸಲು ತಾಂತ್ರಿಕ ಅನುಮೋದನೆಗೊಂಡಿದ್ದು, ಅಂದಾಜು ಪಟ್ಟಿ ತಯಾರಿಯಲ್ಲಿದೆ.<br>4. 66 ಕೆ.ವಿ. ಹಿರಿಯೂರು – ಚಿತ್ರದುರ್ಗಕ್ಕೆ ಜೋಡಿ ಪ್ರಸರಣ ಮಾರ್ಗವನ್ನು ನಿರ್ಮಿಸಲು ತಾಂತ್ರಿಕ ಅನುಮೋದನೆಗೊಂಡಿದ್ದು, ಅಂದಾಜು ಪಟ್ಟಿ ತಯಾರಿಕೆ ಪ್ರಗತಿಯಲ್ಲಿದೆ.<br>5. ಹಿರೆಮಲ್ಲನಹೊಳೆ-ಚಿತ್ರದುರ್ಗ 220 ಕೆ.ವಿ. ಜೋಡಿ ಮಾರ್ಗ ನಿರ್ಮಿಸಲು ಭೂಮಾಲೀಕರ ವಿರೋಧ ಹೆಚ್ಚಾಗಿರುವುದರಿಂದ ಕಾಮಗಾರಿ ನಿಧಾನಗತಿಯಿಂದ ಸಾಗುತ್ತಿದೆ.<br>6. ಹರಿಯಬ್ಬೆ-ಹಿರಿಯೂರು 66 ಕೆ.ವಿ. ಜೋಡಿ ಮಾರ್ಗ ನಿರ್ಮಿಸಲು ಭೂಮಾಲೀಕರ ವಿರೋಧ ಹೆಚ್ಚಾಗಿರುವುದರಿಂದ ಕಾಮಗಾರಿ ನಿಧಾನಗತಿಯಿಂದ ಸಾಗುತ್ತಿದೆ.<br><br>ಮೇಲ್ಕಂಡ ಕಾಮಗಾರಿಗಳು ಪೂರ್ಣಗೊಂಡ ನಂತರ ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಯಲ್ಲಿ ನವೀಕೃತ ಇಂಧನ ಮೂಲದ ಉತ್ಪಾದನೆಯ ತೆರವುಗೊಳಿಸುವಿಕೆ (Evacuation) ಇನ್ನಷ್ಟು ಉತ್ತಮಗೊಳ್ಳಲಿದೆ. |
| (ಇ) | ಪವನ ವಿದ್ಯುತ್ ಉತ್ಪಾದನೆಯನ್ನು ಉತ್ತೇಜನ ನೀಡುವ ದೃಷ್ಟಿಯಿಂದ ವೀಲಿಂಗ್ ಮತ್ತು ಬ್ಯಾಂಕಿಂಗ್ ಸೌಲಭ್ಯವನ್ನು ಮುಂದಿನ 5 ವರ್ಷಗಳವರೆಗೆ ವಿಸ್ತರಿಸಲು ಸರ್ಕಾರ ಚಿಂತಿಸಿದೆಯೇ? | ಪ್ರಸ್ತುತ ಪವನ ವಿದ್ಯುತ್ ಉತ್ಪಾದನೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಸೌಲಭ್ಯ ಚಾಲ್ತಿಯಲ್ಲಿದ್ದು ಹಾಗೂ KERC ಆದೇಶ ದಿನಾಂಕ: 19.07.2022 ರ ಪ್ರಕಾರ ವೀಲಿಂಗ್ ಮತ್ತು ಬ್ಯಾಂಕಿಂಗ್ ಸೌಲಭ್ಯವನ್ನು ದಿನಾಂಕ: 31.10.2022 ರವರೆಗೆ ವಿಸ್ತರಿಸಲಾಗಿದೆ.<br><br>ಆದರೆ, ವೀಲಿಂಗ್ ಮತ್ತು ಬ್ಯಾಂಕಿಂಗ್ ಸೌಲಭ್ಯ ಮುಂದಿನ 5 ವರ್ಷಗಳವರೆಗೆ ವಿಸ್ತರಣೆಯ ಬಗ್ಗೆ ಮಾನ್ಯ KERC ಆಯೋಗವು ನಿರ್ಧರಿಸಬೇಕಾಗಿರುತ್ತದೆ. |

ಸಂಖ್ಯೆ: ಎನರ್ಜಿ 186 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು